ಭರ್ತಿಯಾಗಿತ್ತು. ಯಾವನೋ ಒಬ್ಬ ಹಲ್ಲು ಗಿಂಜುತ್ತಾ 'ಕೂತ್ಕಳಿ...' ಎಂದು ಕರೆದರೆ ಅವಳು ನೋಡಿಯೂ ನೋಡದಂತೆ ಮುಖ ತಿರುಗಿಸಿದಳು. ಅಷ್ಟರಲ್ಲಿ ಎರಡು ಜನ ಕುಳಿತುಕೊಳ್ಳುವ ಸೀಟ್ ಒಂದರಲ್ಲಿ ಕಿಟಕಿಯ ಕಡೆ ಒಂದು ತರಕಾರಿ ಚೀಲ ಇಟ್ಟಿರುವುದು ಕಾಣಿಸಿತು. ಸುತ್ತಲೂ ಒಮ್ಮೆ ಕಣ್ಣಾಡಿಸಿದಳು. ಚೀಲದ ವಾರಸುದಾರರು ಯಾರೋ ಗೊತ್ತಾಗಲಿಲ್ಲ... ಬಾಡಿದ ಕೊತ್ತಂಬರಿ ಕಟ್ಟು, ಮಂಡಕ್ಕಿ ಖಾರ ಪೊಟ್ಟಣ ಚೀಲದಿಂದ ಹೊರ ಇಣುಕಿದ್ದವು. ಅವಳು ಮತ್ತೊಮ್ಮೆ ಸುತ್ತಲೂ ನೋಡಿ ಆ ಚೀಲವನ್ನು ಪಕ್ಕಕ್ಕೆಳೆದು ಕಿಟಕಿಯ ಬದಿಗೆ ಕುಳಿತೇಬಿಟ್ಟಳು. ಗಂಡಸರಾದರೆ ಅದರಲ್ಲೂ ಅಂಕಲ್ ತರಹ ಕಾಣಿಸಿದರೆ ನಕ್ಕು ಸುಮ್ಮನಾಗಿಬಿಡುವುದು. ಅಜ್ಜನಾಗಿದ್ದರೆ, 'ಅಜ್ಜಾ...' ಎಂದು ಮಾತಾಡಿಸುವುದು. ಇನ್ನು ಹುಡುಗನಾಗಿರಲಿಕ್ಕೆ ಸಾಧ್ಯವಿಲ್ಲ. ಯಾಕೆಂದರೆ ಹುಡುಗರದ್ದು ಇಂಥ ಚೀಲವಾಗಿರುವುದಿಲ್ಲ, ಹೆಂಗಸಾದರೆ ಈ ಯಾವ ತಲೆ ಬಿಸಿಯೂ ಇಲ್ಲ ಎಂದುಕೊಂಡು ಇಷ್ಟು ಹೊತ್ತು ಒಳಗಿಟ್ಟಿದ್ದ ಮೊಬೈಲ್ ಹೊರತೆಗೆದು ಲಾಕ್ ಓಪನ್ ಮಾಡಿ ವಾಟ್ಸ್ಆಪ್‌ನ ಮೂವತ್ತೆರಡು ಮೆಸೇಜುಗಳು, ಫೇಸ್‌ಬುಕ್ಕಿನ ಐದು ನೋಟಿಫಿಕೇಷನ್‌ಗಳನ್ನು ನೋಡಿ ಕಣ್ಣರಳಿಸಿದಳು.

'ಸರ್ರೇ ಕ್ಲಾಸ್ ತಗೊಂಡಿದಾರೆ. ಇಲಾಸ್ಟಿಸಿಟಿ ಆಫ್ ಡಿಮ್ಯಾಂಡ್ ಅಂತ ಗರಗಸ ಎಳಿತಿದಾರೆ. ಅಟ್ಟೆಂಡೆನ್ಸ್ ಹಾಕಿಲ್ಲ... ಎಲ್ರಿಗೂ ಅಟೆಂಡೆನ್ಸ್ ಕೊಡ್ತಾರಂತೆ. ನಾನು ಮತ್ತೆ ಪೂಜಾ ಲಾಸ್ಟ್ ಬೆಂಚಲ್ಲಿ ಕೂತಿದಿವಿ...' ಎನ್ನುವ ಕಂಪನಾಳ ಮೆಸೇಜ್ ನೋಡಿ ಏನೋ ಸಾಧಿಸಿದ ಖುಷಿ ಅವಳಿಗೆ... ಉಳಿದ ಮೆಸೇಜುಗಳೆಲ್ಲ 'ಭಲೇ ಬಿಕಾಂ ಹುಡುಗರು' ಗ್ರೂಪಿನಲ್ಲಿನ ಹರಟೆಗಳು, ಓದುವ ವ್ಯವಧಾನ ನಿಜವಾಗಲೂ ಇಲ್ಲ ಎಂದುಕೊಳ್ಳುತ್ತಾ ಹೊರಬಂದು ಮತ್ತೆ ಅವನ ಮೆಸೇಜುಗಳನ್ನು ತೆರೆದಳು.

'ಬಸ್ ಬಂತಾ.'

'ಮಾತಾಡು ಮಾರಾಯ್ತಿ...'

'ನಿನ್ನ ಜೊತೆ ಮಾತಾಡ್ತಾ ಊಟ ಮಾಡಿದ್ರೆ ಊಟ ಗಂಟಲೊಳಗೆ ಇಳ್ಯತ್ತೆ... ಇಲ್ಲಾ ಈ ಆಫೀಸಿನ ಎ.ಸಿಯೊಳಗೂ ಬೆಂದು ಹೋಗ್ತೀನಿ.'

'ನಿಮ್ ಕಾಲೇಜ್ ಲೈಬ್ರರಿ ಬಗ್ಗೆ ಒಂದ್ ಲೇಖನ ಬರ್ಕೊಡು ಅಂದೆ, ಬರದ್ಯಾ?'

'ಈ ಮಟ ಮಧ್ಯಾಹ್ನ
ಸಂಜೆಯ ತಿಳಿಗಪ್ಪು ಬಣ್ಣವನ್ನು
ಕದ್ದು ಹಚ್ಚಿಕೊಂಡುಬಿಟ್ಟಿದೆ...
ನೀನು ತುಟಿ ಬಿಚ್ಚಲಾರೆ.
ಮುಗಿಲು ಎವೆ ಮುಚ್ಚಲಾರದು...
ಹನಿಗಳು ಕೊರೆದ ಎದೆ ಮೇಲೆ ಹಸಿರ ಬರೆದು ನಕ್ಕಿದೆ ಪ್ರೀತಿ...'

ಆ ಸಾಲುಗಳನ್ನು ಓದಿ ಅವಳು ನಡುಗಿದಳು. ಇವನದು ಯಾಕೋ ಹೆಚ್ಚಾಯಿತು, ಆ ದಿನ ಕಂಪನಾ ಗೀಚಿದ –

'ನೀನಿಲ್ಲ
ಈ ಎದೆಯ ನಿರ್ವಾತದಲ್ಲಿ
ಕಣ್ ಹನಿಗಳ ಸ್ತೋತ್ರದಲ್ಲಿ...
ತೀರ ಕಾಣುತ್ತಿಲ್ಲ...